(SRI H. SIDDAVEERAPPA.)

(*b*) The composition of the Committee was as follows :—

Sri H. Siddaveerappa, Minister for Home and Industries (*Chairman*).

Members

Sriyuths—

1. J. Mohamed Imam
2. N. Huchmasthy Gowda
3. R. Subbanna
4. J. P. David
5. Charles S. Pitchamuthu
6. N. Madhava Rao
7. R. J. Rego
8. C. V. Channappa
9. Mohamed Rahmatulla
10. K. Narayanaswami
11. B. M. Abu Baker
12. B. M. Bhatt
13. K. S. Vasan
14. S. L. Jagannatha Rao
15. N. Bharat (*Secretary*).

(*c*) The terms of reference were :

(i) the effect of repeal of the Mysore Duty on Gold Act, 1940 ;

(ii) examination of the position arising out of the Agreement dated 20th February 1949 between Government and the Mining Companies ;

(iii) measures to secure improvement from the Mining Industry.

(*d*) The report is under the consideration of Government.

ಶ್ರೀ ಜಿ. ನಾರಾಯಣಗೌಡ.—ಈ ವರದಿ ಸರ್ಕಾರದ ಕೈಗೆ ಯಾವಾಗ ಸೇರಿತು ?

*ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು ಒಂದು ತಿಂಗಳ ಕೆಳಗೆ.

ಶ್ರೀ ಜಿ. ನಾರಾಯಣಗೌಡ.—ಇದನ್ನು ಪರಿಶೀಲಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲಿಸಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಈ ವರದಿಯನ್ನು ಈ ಸಭೆಯ ಮುಂದೆ ಇಡಲಾಗುತ್ತದೆಯೇ ?

Sri H. SIDDAVEERAPPA.—I would place it on the 24th.

ಶ್ರೀ ಜಿ. ನಾರಾಯಣಗೌಡ.—ಈ ಸಮಿತಿಗೆ ಸದಸ್ಯರುಗಳನ್ನು ಚುನಾವಣೆ ಮಾಡಿದಾಗ ಆ ಕ್ಷೇತ್ರದಲ್ಲಿ ಈ ಮಾನ್ಯ ಸಭೆಯ ಸದಸ್ಯರುಗಳು ಯಾರುಯಾರು ಇದ್ದಾರೋ ಅವರನ್ನು ಚುನಾಯಿಸಬೇಕಾಗಿದ್ದುದು ಸೂಕ್ತವಾಗಿತ್ತಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಕ್ಷೇತ್ರದ ಅಸೆಂಬ್ಲಿ ಸದಸ್ಯರನ್ನು ಈ ಸಮಿತಿಯಲ್ಲಿ ಸದಸ್ಯರನ್ನಾಗಿ ತೆಗೆದುಕೊಂಡಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಶ್ರೀರ್ಮಾ ಸ್ವಾಮಿ ದೊರೆ ಅವರ ಹೆಸರು ಅಲ್ಲಿ ಇಲ್ಲವಲ್ಲಾ ?

ಶ್ರೀ ಎಚ್. ಸಿದ್ದವೀರಪ್ಪ.—ಒಬ್ಬರನ್ನು ಮಾತ್ರ ತೆಗೆದುಕೊಂಡಿದ್ದೇವೆ.

Sri SYDNEY A THOMAS.—May I know whether there was any representation from the Minig Companies for being represented on this Committee ?

Sri H. SIDDAVEERAPPA.—No.

Sri SYDNEY A THOMAS.—Then, will not the report be rather one-sided?

Sri H. SIDDAVEERAPPA.—The blame is on the Companies themselves. They are absolutely non-co-operative. We cannot be held responsible for that.

Major Industry in K.G.F. (Formation of Committee.)

Q.—69. Sri G. NARAYANA GOWDA (Mulbagal-Srinivasapur).—

Will the Government be pleased to state :—

whether the Hon'ble Chief Minister promised the citizens of the Kolar Gold Field that he would constitute a Committee to suggest ways and means to start a major industry in the Kolar Gold Field area ?

A.—Sri H. SIDDAVEERAPPA (Minister for Home and Industries).—

Yes, A Committee has been constituted.

ಶ್ರೀ ಜಿ. ನಾರಾಯಣಗೌಡ.—ಈ ಸಮಿತಿಯನ್ನು ಯಾವಾಗ ರಚನೆಮಾಡಿದಿರಿ ?

*ಶ್ರೀ ಎಚ್. ಸಿದ್ದವೀರಪ್ಪ.—ಫೆಬ್ರವರಿ 3ನೇ ತಾರೀಖಿನಲ್ಲಿ.

ಶ್ರೀ ಜಿ. ನಾರಾಯಣಗೌಡ.—ಈ ಸಮಿತಿಯ ಮಾನ್ಯ ಸದಸ್ಯರುಗಳು ಯಾರು ?

Sri H. SIDDAVEERAPPA.—The Director of Industries and Commerce in Mysore, Chairman ; The Director of Rural Industrialisation Scheme, Sri Perumal, Sri Swami Dorai are members and the Secretary, Board of Management for Industrial Concerns, is the Secretary to the Committee.

ಶ್ರೀ ಜಿ. ನಾರಾಯಣಗೌಡ.—ಆ ಸಮಿತಿಯ terms of reference ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪ್ರದೇಶದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ತೆಗೆದುಕೊಳ್ಳಬಹುದು ಎನ್ನ ತಕ್ಕಂಥ ವಿಚಾರದಲ್ಲಿ ಅವರು ಒಂದು ವರದಿಯನ್ನು ಕೊಡಬೇಕೆಂಬುದಾಗಿ ಆ terms of reference ನಲ್ಲಿ ನಮೂದು ಮಾಡಲಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಮಿತಿಯನ್ನು ಮಾಡಬೇಕಾದ ಅವಶ್ಯಕತೆ ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಉರಿಗಾಂ ಗೋಲ್ಡ್ ಮೈನಿಂಗ್ ಕಂಪೆನಿಯನ್ನು ಮುಚ್ಚಿದ ಪ್ರಯುಕ್ತ alternative employment ನ್ನು ಏರ್ಪಾಡು ಮಾಡುವುದು ಸೂಕ್ತವೆಂದು ಮಾಧವರಾಯರ ಸಮಿತಿಯವರು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೆ ಪದೇ ಪದೇ ಆ ಕ್ಷೇತ್ರದ ಜನರು ಇನ್ನೊಂದು ಕೈಗಾರಿಕೆಯನ್ನು ಅವರಿಗೆ ಒದಗಿಸಿಕೊಡಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರ ಮುಂದೆ ಇಡುತ್ತಿದ್ದಾರೆ. ಆದ್ದರಿಂದ ಈ ಸಮಿತಿಯನ್ನು ಮಾಡುವ ಅವಶ್ಯಕತೆ ಬಂತು.

ಶ್ರೀ ಕೆ. ಪುಟ್ಟಸ್ವಾಮಿ.—ಈ ಮೈನಿಂಗ್ ಕಂಪೆನಿಗಳವರು ಕೆಲಸಗಳನ್ನು ಕೊಡುವಷ್ಟು ಶಕ್ತಿ ಪಡೆದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಅವಕಾಶ ವಿದೆಯೋ ಅಷ್ಟು ಕೆಲಸಗಳನ್ನು ಕಂಪೆನಿಗಳವರು ಕೊಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ "They were absolutely non-co-operative" ಎಂದು ಹೇಳಿದ್ದೀರಿ. ಅಂತಹ non-co-operative attitude ನಿಂದ ಏನಾದರೂ ಈ ಸಮಿತಿಯನ್ನು ನೇಮಕ ಮಾಡುವ ಅವಶ್ಯಕತೆ ಬಂತೇ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಅಂತಹ non-co-operating attitude ತೋರಿಸಿಲ್ಲ.

Silk grainage near Devanahalli.

Q.—145. **Sri R. MUNISWAMIAH** (Bangalore North—Scheduled Castes).—

Will the Government be pleased to state :—

(*a*) whether they have thought of starting a silk grainage near Devanahalli ;

(*b*) the amount spent on this scheme by this time ;

(*c*) the amount that the Central Government has sanctioned towards this?

A.—**Sri H. SIDDAVEERAPPA** (Minister for Home and Industries).—

(*a*) The Department has started a grainage from the year 1951-52.

(*b*)

		Rs.	a.	p.
1951-52	...	1,042	8	0
1952-53	...	787	12	0
1953-54	...	741	15	6

(*c*) The Central Government have not sanctioned any amount for this purpose. The entire expenditure is borne by the Government of Mysore.

ಶ್ರೀ ಆರ್. ಮುನಿಸ್ವಾಮಯ್ಯ.—ದೇವನಹಳ್ಳಿಯಲ್ಲಿ ಗೌರ್ನಮೆಂಟ್ ಗ್ರೈನೇಜ್ ಪ್ರಾರಂಭಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ದೇವನಹಳ್ಳಿಯಲ್ಲಿ ಒಂದು ಗೌರ್ನಮೆಂಟ್ ಗ್ರೈನೇಜ್ ಇದೆಯಲ್ಲ?

ಶ್ರೀ ಆರ್. ಮುನಿಸ್ವಾಮಯ್ಯ.—ಸರ್ಕಾರದವರು ಗುಡುವನಹಳ್ಳಿದ ಬಳಿ ಒಂದು ಗ್ರೈನೇಜ್ ಸೆಂಟರ್ ಸ್ಥಾಪನೆ ಮಾಡಿದ್ದಾರಲ್ಲವೆ?

Sri H. SIDDAVEERAPPA.—There is a proposal to start a centre entirely for foreign cocoons.

ಶ್ರೀ ಆರ್. ಮುನಿಸ್ವಾಮಯ್ಯ.—ಅದಕ್ಕೆ ಇಂಡಿಯಾ ಸರ್ಕಾರದವರು ಏನು ಸಹಾಯ ಒದಗಿಸಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸ್ಕೀಮನ್ನು examine ಮಾಡಿ Central Silk Boardನವರು 67 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಕೆಲಸ ನಡೆಸುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಅಲ್ಲಿ ಪರೀಕ್ಷಾರ್ಥವಾಗಿ ಭಾವಿಗಳನ್ನು ತೆಗೆಸಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಆದಷ್ಟು ಜಾಗ್ರತೆ ಇದನ್ನು finalise ಮಾಡಿ ಕೆಲಸ ನಡೆಸಬೇಕೆಂದಿದ್ದೇವೆ.

Standard Weights and Measures.

Q.—158. **Sri KOTRA BASAVANA GOUD** (Kudligi).—

Will the Government be pleased to state :—

whether it is the intention of the Government to introduce standard weights and measures throughout the State immediately?

A.—**Sri H. SIDDAVEERAPPA** (Minister for Home and Industries).—Standard weights and measures are in use throughout the State.

ಶ್ರೀ ಕೊಟ್ರ ಬಸವನಗೌಡ.—ರೂಲ್‌ಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದ್ದೀರಾ?

*ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತಿದ್ದೇವೆ.

ಶ್ರೀ ಕೊಟ್ರ ಬಸವನಗೌಡ.—ಬೆಲ್ಲ, ಮೆಣಸಿನ ಕಾಯಿ, ಎಣ್ಣೆ, ಇವುಗಳನ್ನು ಯಾವ ತೂಕದಲ್ಲಿ ಕೊಡುತ್ತಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಇವುಗಳನ್ನು standard weight ಗಳಲ್ಲಿ ಮಾರುತ್ತಾರೆ.

ಶ್ರೀ ಕೊಟ್ರ ಬಸವನಗೌಡ.—ಬೇರೆ ಬೇರೆ ಗ್ರಾಮಗಳಲ್ಲಿ ಬೇರೆ ಬೇರೆ ತೂಕಗಳಲ್ಲಿ ಮಾರುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—Standard weight ಇಲ್ಲಿಗೆ ಅನ್ವಯಿಸುವುದಿಲ್ಲ. ಒಂದು ಕಡೆ 10 ಸೇರು ದಡೆ ಇರಬಹುದು. ಇನ್ನೊಂದು ಕಡೆ 12 ಸೇರು ದಡೆ ಇರಬಹುದು. ಹೀಗೆ ಬೇರೆ ಬೇರೆ ಇರಬಹುದು ; ಆದರೆ standard weight specification ಒಂದೇ.

ಶ್ರೀ ಕೊಟ್ರ ಬಸವನಗೌಡ.—ತೂಕ ಬೇರೆ ಬೇರೆ ಇರುವುದರಿಂದ ಮೋಸಮಾಡುವುದಕ್ಕೆ ಅವಕಾಶವಾಗುತ್ತದೆಯೇ? ಒಂದು ದಡೆ 10 ಸೇರು ಇರಬೇಕೆಂದು ರೂಲ್ಸ್ enforce ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸಭೆ ಮುಂದೆ ಇದಕ್ಕೆ ಸಂಬಂಧಪಟ್ಟ ಬಿಲ್ಲು ಇದೆ. ಅದು ಪಾಸ್ ಆದ ಕೂಡಲೇ ಜಾರಿಗೆ ತರುತ್ತೇವೆ.